ಬಂದಿದ್ದು, ಎಲ್ಲಾ ನಡೆದಿದೆ. ಆದುದರಿಂದ, ಯಾವುದನ್ನು ಮೊದಲು ತೆಗೆದುಕೊಳ್ಳೋಣವೆಂದು ತಾವು ಹೇಳಿ. ಯಾವುದಾದರೂ ಅಗತ್ಯವಾಗಿ ಆಗಲೇಬೇಕಾದ, ಪಾಸ್ ಆಗಲೇಬೇಕಾದ ಬಿಲ್ ಇದ್ದರೆ.... ಕೊನೆಯಲ್ಲಿ ನಾವು....

ಶ್ರೀ ಎಂ.ಪಿ. ಪ್ರಕಾಶ್: ತಾವು ಹೇಳಿದಂತೆ....

ಶ್ರೀ ಆರ್.ವಿ. ದೇಶಪಾಂಡೆ: ಬರಗಾಲದ ಬಗ್ಗೆ ಮೊದಲು ತೆಗೆದುಕೊಳ್ಳಿರೆಂದು ಅವರೇ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಹಾಗೆ ಹೇಳಲಿಲ್ಲ. ಮಸೂದೆಗಳಿವೆ, ಬರಗಾಲದ ಬಗ್ಗೆಯೂ ಇದೆಯೆಂದು ಹೇಳಿದೆ. ಬಹಳ ಮುಖ್ಯವಾಗಿರತಕ್ಕ ಒಂದು ಮೆಸೇಜನ್ನು governor ರವರು ಕಳುಹಿಸಿಕೊಟ್ಟಿದ್ದಾರೆ. ಹಿಂದೆ ನಾವು ಲಾಭದಾಯಕ ಹುದ್ದೆಗಳ ವಿಚಾರದಲ್ಲಿ ಎರಡೂ ಸದನ ಪಾಸ್ ಮಾಡಿ ಕಳುಹಿಸಿರುವ ವಿಷಯದಲ್ಲಿ ರಾಜ್ಯಪಾಲರು ಒಂದು ಸಂದೇಶವನ್ನು ಉಭಯ ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಕಳುಹಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಮತ್ತೆ ಪರ್ಯಾಲೋಚಿಸಬೇಕೆಂದು ನಾವು ಈವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿದೆ. ಆ ಕಾರಣಕ್ಕಾಗಿ ಮೊದಲು ಅದನ್ನು ಆಧ್ಯತೆಯ ಮೇಲೆ ತೆಗೆದುಕೊಂಡು ಅದಕ್ಕೆ ಎಲ್ಲಾ ನಮ್ಮ ಸದಸ್ಯ ಮಿತ್ರರನ್ನು ಕೇಳಿಕೊಳ್ಳುತ್ತಿದ್ದೇನೆ. ಬಹಳ ಮುಖ್ಯವಾಗಿರತಕ್ಕ ವಿಚಾರ ಅದು. ಲಾಭದಾಯಕ ಹುದ್ದೆ ಯಾವುದು ಎಂದು ಪರಿಗಣಿಸಬೇಕಾಗಿರತಕ್ಕ ಹಿನ್ನೆಲೆಯಲ್ಲಿ ನಾವು....

ಶ್ರೀ ವೈಜನಾಥ್ ಪಾಟೀಲ್: ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ಸರ್ಕಾರದಿಂದ ಸಿಕ್ಕದ ಕಾರಣ ನಾನು ಸಭೆಯಿಂದ ಹೊರಕ್ಕೆ ಹೋಗುತ್ತಿದ್ದೇನೆ.

(ಮಾನ್ಯ ವೈಜನಾಥ್ ಪಾಟೀಲ್‌ರವರು ಸಭೆಯಿಂದ ಹೊರಕ್ಕೆ ನಡೆದರು)

ಅಧ್ಯಕ್ಷರು: ತಾವು ಸಭೆಯಿಂದ ಹೊರಕ್ಕೆ ಹೋಗುವ ಉದ್ದೇಶದಿಂದ ಆ ಪ್ರಶ್ನೆ ಕೇಳುತ್ತಿರುವುದು.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿಧೇಯಕ, ಪ್ರವಾಹ ಬರಗಾಲ ಉತ್ತರ ಕರ್ನಾಟಕದ ಅಭಿವೃದ್ಧಿ ಇವುಗಳಲ್ಲಿ ಯಾವುದು ಚರ್ಚೆಯಾಗಬೇಕೆಂಬುದರ ಬಗ್ಗೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲ ಅನರ್ಹತೆ ತಡೆಗಟ್ಟುವ ತಿದ್ದುಪಡಿ ವಿಧೇಯಕ 2006ನ್ನು ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ಪರಿಗಣನೆಗೆ ಹಿಂದಿರುಗಿಸಲ್ಪಟ್ಟ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ತಿದ್ದುಪಡಿ ವಿಧೇಯಕವನ್ನು ತಾವು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿನ್ನೆ ರಾತ್ರಿ 11 ಗಂಟೆಯವರೆಗೆ ಸದನ ನಡೆಯಿತು. ಕೊನೆಯ ಸಮಯದಲ್ಲಿ ಮಾನ್ಯ ಪ್ರಕಾಶ್‌ರವರು ಇದರ ಬಗ್ಗೆ ಮಂಡನೆ ಮಾಡತಕ್ಕ ರೀತಿಯಲ್ಲಿ ನಾವು ಆಕ್ಷೇಪಣೆ ಮಾಡಿದ್ದೇವೆ. ಏಕೆಂದರೆ office of the profit billಗೆ ಈಗಾಗಲೇ ತಾವು ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ಸೆಷನ್‌ನನ್ನು ಕರೆದಿದ್ದೀರಿ. ಎರಡು ದಿವಸಗಳ ಕಾಲ ಚರ್ಚೆಯಾಯಿತು. ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿರಿ, ರಾಜ್ಯಪಾಲರು ಅದರಲ್ಲಿ ಮೂರು ಅಬ್‌ಸರ್ವೇಷನ್ ಮಾಡಿ ಸರ್ಕಾರದ ಕ್ಲಾರಿಫಿಕೇಷನ್ ಕೂಡ ಕೇಳಿದ್ದಾರೆ. ಆಗ ನಾವು ಏನು ಹೇಳಿದ್ದೇವೆಂದರೆ, ಇನ್ನೂ ಕೂಡ ರಾಷ್ಟ್ರಪತಿಯವರು ಅಂಗೀಕಾರ ಮಾಡಿಲ್ಲ, ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಡಿಸ್‌ಕಷನ್ ಆದರೂ ಕೂಡ, ಅಲ್ಲೂ ಕೂಡ ರಾಷ್ಟ್ರಪತಿಯವರು ಪ್ರಧಾನ ಮಂತ್ರಿಯವರಿಗೆ ಕ್ಲಾರಿಫಿಕೇಷನ್ ಕೇಳಿದ್ದಾರೆ. ಪ್ರಧಾನ ಮಂತ್ರಿಯವರೂ ಕೂಡ ಹೋಗಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿದ್ದಾರೆ. ಈವತ್ತು ಏನಾಗಿದೆ ಎಂದರೆ, ಪಾರ್ಲಿಮೆಂಟ್‌ನಲ್ಲಿ ಕೂಡ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಮಾಡಿದ್ದಾರೆ. ನಮ್ಮವರೇ ಆದಂಥ ಕರ್ನಾಟಕದ ಇಕ್ಬಾಲ್ ಸರಡಗಿಯವರು he is heading that panel. ಈಗಾಗಲೇ ಆ ಪಾರ್ಲಿಮೆಂಟ್ ಜಾಯಿಂಟ್ ಸೆಲೆಕ್ಟ್ ಕಮಿಟಿ ಒಂದು ಸಲ ಕುಳಿತಿದ್ದಾರೆ. ಅದರಲ್ಲಿ ಸೀತಾರಾಮ್ ಯಚೂರಿರವರು ಇದ್ದಾರೆ, ಜೇಟ್ಲಿಯವರು ಮುಂತಾದವರು ಇದ್ದಾರೆ. ಅವರೆಲ್ಲರೂ ಸಮಾಲೋಚನೆ ಮಾಡಿದ್ದಾರೆ. Office of profit bill ನಲ್ಲಿ ಏನಾಗುತ್ತಿದೆ ಎಂದು ಅವರನ್ನು ಮೊನ್ನೆ ಕೇಳಿದೆವು. ನಾವು ಎಲ್ಲಾ ಪ್ರದೇಶಗಳಿಗೆ ಹೋಗಿ ಭೇಟಿ ಮಾಡುತ್ತೇವೆ, ರಾಜ್ಯ ಸರ್ಕಾರಕ್ಕೆ ಭೇಟಿಯಾಗಿ ಸಮಗ್ರವಾಗಿ ಯಾವ ರೀತಿಯಾಗಿ ಆಗಬೇಕು ಎನ್ನತಕ್ಕ ರೀತಿಯಲ್ಲಿ ನಾವು ವಿಚಾರ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾವು ಈವತ್ತು ಗೃಹ ಸಚಿವರಿಗೆ ಹೇಳತಕ್ಕದ್ದೇನೆಂದರೆ, ನಿನ್ನೆ ಮತ್ತು ಈವತ್ತು ಇದೇ ರೀತಿ ಕಲಾಪವಾಗಿದೆ. ಇದರ ಬಗ್ಗೆ ನಾವು ಚರ್ಚೆಯಲ್ಲಿ ಭಾಗವಹಿಸಲು ನಾವು ತಯಾರಾಗಿಯೇ ಬಂದಿದ್ದೇವೆ. ಈಗಾಗಲೇ ಆರು ಗಂಟೆಯಾಗುತ್ತಿದೆ. ಬರಗಾಲದ ಬಗ್ಗೆ ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆಯಾಗಬೇಕು ಎಂಬ ಕೂಗು ಇದೆ. ಈಗಾಗಲೇ ನಮ್ಮ ವಿರೋಧ ಪಕ್ಷದ ಬೇರೆ ಫ್ಲೋರ್‌ಲೀಡರ್ಸ್ ಸಭಾತ್ಯಾಗ ಮಾಡಿದ್ದಾರೆ. ನಿನ್ನೆ 11 ಗಂಟೆಯವರೆಗೆ Finance billಗಳ ಬಗ್ಗೆ ಮಾನ್ಯ ಯಡಿಯೂರಪ್ಪನವರದ್ದು ಐದು ಗಂಟೆಗಳ ಕಾಲ ಚರ್ಚೆಯಾಯಿತು. ಆಗ ಮುಖ್ಯಮಂತ್ರಿಗಳು ಇರಲಿಲ್ಲ, ನಾವೆಲ್ಲರೂ ಅದಕ್ಕೆ ಸಹಕಾರ ಮಾಡಿದೆವು. ನಾವು 11 ಗಂಟೆಯವರೆಗೆ ಇದ್ದು ಆ ಬಿಲ್ಲನ್ನು ಪಾಸ್ ಮಾಡಿ ಕಳುಹಿಸಿದ್ದೇವೆ. ಈವತ್ತು ನಾನು ಏನು ಹೇಳುತ್ತಿದ್ದೇನೆಂದರೆ, ಈವತ್ತು ಇಲ್ಲಿ ಇರತಕ್ಕ ಏನು ಬರಗಾಲದ ಪರಿಸ್ಥಿತಿ ಇದೆ, ಪ್ರವಾಹ ಪೀಡಿತರ ಪರಿಸ್ಥಿತಿ ಇದೆ, ಏನು ಸರ್ಕಾರ ಕ್ರಮ ತೆಗೆದುಕೊಂಡಿದೆ, ಎಷ್ಟು ಹಣವನ್ನು

ಕೊಟ್ಟಿದ್ದಾರೆ, ಕೇಂದ್ರದಿಂದ ಏನು ಹಣ ಬಂದಿದೆ ಇವೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಈವತ್ತು ಗಡಿ ಭಾಗದಲ್ಲಿ ಅಧಿವೇಶನ ನಡೆಯುತ್ತಿದೆ. ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಡಾ: ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕ ರೀತಿಯಲ್ಲಿ ಕೇವಲ ಹೇಳಿಕೆ ಹೇಳುತ್ತಿದ್ದಾರೆ. ಆದರೆ ಯಾವುದೇ ಅನುಷ್ಠಾನವಾಗುತ್ತಿಲ್ಲ. ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಯಾದಾಗ ಡಾ: ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ವರದಿಯನ್ನು ಕೊಡಬೇಕೆಂದು ಹೇಳಿದರು. ಡಾ: ನಂಜುಂಡಪ್ಪನವರು ವರದಿಯನ್ನು ಕೊಟ್ಟರು. ಈವತ್ತು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವಾಗಬೇಕು, ಬೀದರ್‌ನಲ್ಲಿ ವೆಟರ್ನರಿ ವಿಶ್ವವಿದ್ಯಾನಿಲಯವಾಗಬೇಕು, ಹುಬ್ಬಳ್ಳಿಯಲ್ಲಿ ಹನಿ ನೀರಾವರಿ ನಿಗಮವಾಗಬೇಕು, ಯಾವ ನಂಜುಂಡಪ್ಪನವರ ವರದಿಯನ್ನು ರಚನೆ ಮಾಡಿ, ಅವರ ಶಿಫಾರಸ್ಸಿನ ಮೇಲೆ ಆಗಿನ ಸರ್ಕಾರ ಅನುಷ್ಠಾನಕ್ಕೆ ತರುತಕ್ಕ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡಿದೆ. ಈವತ್ತು ಬೀದರ್‌ನಿಂದ ಬೆಳಗಾಂವರೆಗೆ ಇರತಕ್ಕಂಥ ಈ ಬರ ಪೀಡಿತ ಪ್ರದೇಶಕ್ಕೆ, ಈ ಗಡಿಭಾಗದಲ್ಲಿರುವ ಜನರಿಗೆ ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ವಿಚಾರವಾಗಬೇಕು. ಈವತ್ತು ಬರಗಾಲದ ಬಗ್ಗೆ ವಿಚಾರ ಆಗಬೇಕು. ಪ್ರವಾಹ ಪೀಡತಕ್ಕೆ ಏನು ಮಾಡಿದ್ದಾರೆ? ಲೋಕಸಭೆ ನಡೆಯುತ್ತಿತ್ತು. ಪ್ರಧಾನ ಮಂತ್ರಿಯವರು ಬಂದರು, ಗೋವಾದಲ್ಲಿ ಬಹಳ ಮಳೆ ಬರುತ್ತಿತ್ತು, ಶರದ್‌ಪವಾರ್‌ರವರು ಬಂದು ಹೋದರು. ಅಥಣಿ ರಿಹ್ಯಾಬಿಲಿಟೇಷನ್ ಕ್ಯಾಂಪ್‌ಗೆ ಸೋನಿಯಾಗಾಂಧಿಯವರೂ ಸಹ ಬಂದು ಭೇಟಿ ಕೊಟ್ಟಿದ್ದಾರೆ. 357 ಕೋಟಿ ರೂಪಾಯಿ ಪ್ರವಾಹ ಪೀಡಿತ ಪ್ರದೇಶದ ಜಿಲ್ಲೆಗಳಿಗೆ ಮೊಟ್ಟಮೊದಲನೆಯದಾಗಿ ಇವರು ಹಣವನ್ನು ಕೊಟ್ಟಿದ್ದಾರೆ. ಈವತ್ತು ಕೇಂದ್ರದ ಗೃಹ ಮಂತ್ರಿಯಾಗಿ ಅವರೂ ಸಹ 250 ಕೊಟಿ ಕೊಟ್ಟಿದ್ದಾರೆ. ಈವತ್ತು ಯಾವ್ಯಾವ ಜಿಲ್ಲೆಗಳಿಗೆ, ತಾಲ್ಲೂಕಿನಲ್ಲಿ ಜನರ ನೆರವಿಗೆ ಬರತಕ್ಕ ರೀತಿಯಲ್ಲಿ ಸರ್ಕಾರ ನಡೆಸತಕ್ಕ ತಾವು ವಿಶ್ವಾಸ ಮೂಡಿಸತಕ್ಕ ರೀತಿಯಲ್ಲಿ ಕೆಲಸ ಮಾಡಬೇಕು. ಈವತ್ತು ಅದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಅದರ ಮಧ್ಯದಲ್ಲಿ ಈವತ್ತು ಮಾನ್ಯ ಪ್ರಕಾಶ್‌ರವರು office of profit bill ನ್ನು ತರುವ ಬಗ್ಗೆ ಹೇಳಿದ್ದಾರೆ. ಏಕೆಂದರೆ ಶಾಸಕರಿಗೆ ನಾವು ಇದನ್ನು ತಂದಿದ್ದೇವೆ ಎಂದು ಹೇಳಬೇಕಲ್ಲಾ office of profit bill ಎನ್ನತಕ್ಕ ರೀತಿಯಲ್ಲಿ ಹೇಳಿದ್ದಾರೆ. ನಿಗಮ ಮಂಡಳಿಗಳ ಚೇರ್ಮನ್ ನೇಮಕಾತಿ ಈವತ್ತು ಆಗಲೇ ಬೇಕಾಗಿದೆ. ಬಹಳ ಜನರು ನೋಡುತ್ತಿದ್ದಾರೆ. ಅದಕ್ಕೆ ನಾವೇನೂ ಅಡ್ಡಿ ಬರುತ್ತಿಲ್ಲ. ಸರ್ಕಾರ ನಿಮ್ಮದಿದೆ. ಅದನ್ನು ನೀವು ಮಾಡಿ. ಆದರೆ ಈವತ್ತಿನ ದಿವಸ ಇದೆಲ್ಲವನ್ನೂ ಬದಿಗೊತ್ತಿ ಈ ಬಿಲ್ಲುಗಳನ್ನು ತರಬೇಡಿ. ನೇರವಾಗಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾಗಿರತಕ್ಕ ಸಂದೇಶ. ಮಾನ್ಯ ರಾಜ್ಯಪಾಲರು ಕಳುಹಿಸಿಕೊಟ್ಟಿರುವ ಸಂದೇಶವನ್ನು ನಾವು

ಬಹಳ ದಿವಸಗಳ ಕಾಲ ಇಟ್ಟುಕೊಳ್ಳಲು ಬರುವುದಿಲ್ಲ. ಪಾರ್ಲಿಮೆಂಟ್‌ನಲ್ಲಿ ನಡೆದಿರುವ ವಿಷಯವನ್ನೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ವ್ಯಕ್ತ ಮಾಡಿದ್ದಾರೆ. ಅಲ್ಲಿ ಈ ವಿಚಾರವನ್ನು ಚರ್ಚೆ ಮಾಡಿ ಪುನರ್ ಪರ್ಯಾಲೋಚನೆ ಮಾಡತಕ್ಕ ಅವಶ್ಯಕತೆ ಇಲ್ಲವೆಂದು ಮೊದಲು ಪಾಸ್ ಮಾಡಿದಂಥ ಲಾಭದಾಯಕ ಹುದ್ದೆಯನ್ನೇ ಮತ್ತೆ ಅಧ್ಯಕ್ಷರಿಗೆ, ರಾಷ್ಟ್ರಪತಿಯವರಿಗೆ ಕಳುಹಿಸಿಕೊಡತಕ್ಕಂಥ ನಿರ್ಣಯವಾಗಿದೆ. ಆ ನಿರ್ಣಯ ಚರ್ಚೆಯಾಗುವುದರ ಒಳಗಾಗಿ ರಾಷ್ಟ್ರಪತಿಯವರು ಅಂಕಿತವನ್ನು ಹಾಕಿದರು. ರಾಷ್ಟ್ರಪತಿಗಳು ಅಂಕಿತವನ್ನು ಹಾಕಿದ ಹಿನ್ನೆಲೆಯಲ್ಲಿ ಅವರಿಗೆ ಈಗ ತಮ್ಮ ಲೋಕಸಭಾ ಸದಸ್ಯರ ಸ್ಥಾನಗಳೇನು, ಸುಮಾರು 45ರಷ್ಟು ಜನ ಕಾಂಗ್ರೆಸ್ ಪಕ್ಷದವರಿದ್ದರು, ಸುಮಾರು 15ರಷ್ಟು ಜನ ಕಮ್ಯುನಿಸ್ಟ್ ಪಾರ್ಟಿಯವರಿದ್ದರು, ಸುಮಾರು 30 ಜನ ಭಾರತೀಯ ಜನತಾ ಪಕ್ಷದವರಿದ್ದರು. ಇವರೆಲ್ಲರೂ ಕೂಡ ಅದು ಪೂರ್ವಾನ್ವಯವಾಗದೆ ಹೋಗಿದ್ದರೆ ಅನರ್ಹರಾಗುತ್ತಿದ್ದರು. ಅದಕ್ಕೆ ಅಂಕಿತವನ್ನು ರಾಷ್ಟ್ರಪತಿಯವರು ಹಾಕಿದ್ದರಿಂದ ಅವರ ಸ್ಥಾನಮಾನಗಳು ಸಂರಕ್ಷಿಸಲ್ಪಟ್ಟವು. ಆ ರೀತಿ ಸಂರಕ್ಷಿಸಲ್ಪಟ್ಟ ಮೇಲೆ ಮುಂದಿನ ವಿಚಾರಗಳು ಏನಾಗಬೇಕು, ಇದನ್ನೇ ಸೇರಿಸಬೇಕೇ ಅಥವಾ ಮೂಲ ಕಾಯ್ದೆಗೆ ಸೇರಿಸಬೇಕೇ ಬೇಡವೆ ಎಂಬ ಬಗ್ಗೆ ಜಾಯಿಂಟ್ ಸೆಲಕ್ಟ್ ಸಮಿತಿಗೆ ಕಳುಹಿಸಿ ಅದನ್ನು ಅವರು ಮಾಡುತ್ತಾರೆ, ಅದು ಒಂದು ವರ್ಷ ಇಲ್ಲವೆ ಎರಡು ವರ್ಷದ ಮೇಲೆ ಬರಬಹುದು. ಅಲ್ಲಿ ತಾವು ಏನು ಹೇಳುತ್ತೀರೆಂದರೆ, ನಮ್ಮವರ್ಯಾರನ್ನೋ ಅಧ್ಯಕ್ಷರನ್ನಾಗಿ ಮಾಡಬೇಕು ಎನ್ನತಕ್ಕ ಕಾರಣಕ್ಕಾಗಿಯೇ ಈ ಈ ರೀತಿ ಮಾಡಿದ್ದೀರಿ ಎನ್ನುವಂಥದ್ದು ಒಂದು ಲೌಖಿಕವಾದ ರೀತಿಯಲ್ಲಿ ಸರಿಯಾಗಿದ್ದರು ಕೂಡ ಎಲ್ಲಾ ಪಕ್ಷದವರು ಮಾಡಿರತಕ್ಕದ್ದು ಅದೇ. ಆ ಕಾರಣಕ್ಕಾಗಿ ಇದು ತರಾತುರಿಯಲ್ಲಿ ಆಗಲಿ ಎನ್ನತಕ್ಕದ್ದನ್ನು ಕೇಳುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಾನು ಮಾನ್ಯ ಮುಖ್ಯಮಂತ್ರಿಯವರ, ಸಭಾನಾಯಕರ ಒಪ್ಪಿಗೆಯನ್ನು ಪಡೆದಿದ್ದೇನೆ. ತಾವು ದಯವಿಟ್ಟು ಸಹಕರಿಸುವುದಾದರೆ .ಈವತ್ತು ಬರಗಾಲ ಮತ್ತು ಉತ್ತರ ಕರ್ನಾಟಕದ ಬಗ್ಗೆ ಬಹಳ ಮಹತ್ವದ ವಿಚಾರ ಇರುವುದರಿಂದ ಅದು ಚರ್ಚೆಗೆ ಬರಲಿ. ಆದರೆ ನಾವೇನು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಾಳೆ ರಾಜ್ಯಪಾಲರು ತಮ್ಮ ಭಾಷಣವನ್ನು ದಯಪಾಲಿಸಿದ ನಂತರ ನಾವು ಅನಿರ್ಧಿಷ್ಟಾವಧಿಗೆ ಶಾಸನ ಸಭೆಯನ್ನೇನು ಮುಂದಕ್ಕೆ ಹಾಕಬೇಕೆಂದು ನಿರ್ಣಯವನ್ನು ಮಾಡಿದ್ದೆವು ಅದನ್ನು ತಾವು ಒಪ್ಪಿಕೊಳ್ಳುವುದಾಗಿದ್ದರೆ ನಾವು ಬದಲಾಯಿಸಬಹುದು. ತಾವು ಒಪ್ಪಿಕೊಳ್ಳುವುದಾಗಿದ್ದರೆ ಮಾನ್ಯ ಅಧ್ಯಕ್ಷರು ಒಪ್ಪಿಕೊಳ್ಳುವುದಾಗಿದ್ದರೆ ನಮ್ಮ ಬಿಸ್‌ನೆಸ್ ಅಡ್ವೈಸರಿ ಕಮಿಟಿಯನ್ನು ಕರೆದು ಮುಂದೆ ಚರ್ಚೆ ಮಾಡತಕ್ಕದ್ದಾಗಿದ್ದರೆ 29ನೇ ತಾರೀಖಿನವರೆಗೆ ಚರ್ಚೆ ಮಾಡುವುದಾಗಿದ್ದರೆ ಬರಗಾಲ ಮತ್ತು ಪ್ರವಾಹದ ಬಗ್ಗೆ ಚರ್ಚೆಯಾಗಲಿ. ಮತ್ತು ನಮ್ಮ ಮಸೂದೆಗಳನ್ನು

ಕೂಡ ತಾವು ಒಪ್ಪಿಕೊಳ್ಳತಕ್ಕ ರೀತಿಯಲ್ಲಿ ಸದನ ಒಪ್ಪಿಕೊಳ್ಳುವುದಾಗಿದ್ದರೆ ನಾವು 29ರವರೆಗೆ ಕಾಯಲು ತಯಾರಿದ್ದೇವೆ. ತಾವು ದಯವಿಟ್ಟು ಅದರ ಬಗ್ಗೆ ಸಕಾರಾತ್ಮಕವಾಗಿ ಹೇಳಿದರೆ ಈವತ್ತು ಅದರ ಬಗ್ಗೆ ಚರ್ಚೆಯಾಗಲಿ. ಬೇಕಾದರೆ ನಾವು ಈ ಮಸೂದೆಯನ್ನು ನಾಳೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸುತ್ತೇವೆ ಎಂದು ವಿನಂತಿ ಮಾಡಿಕೊಳ್ಳಲು ನಾನು ತಯಾರಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವಂತೆ Business Advisory Committeeಯಲ್ಲೂ ಕೂಡ ನಾವು ಕೆಲವು ವಿಷಯಗಳನ್ನು ಮಾತನಾಡಿ, ಈ ಭಾಗಕ್ಕೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಅದರ ಒಂದು ಭಾಗವಾಗಿ ಮಹಾಜನ್ Commission ವರದಿ ಜಾರಿಗೆ ತರುವ ಬಗ್ಗೆ unanimously ನಾವೆಲ್ಲರೂ ಕೂಡ ಒಪ್ಪಿಕೊಂಡು ಆ ಸಂಬಂಧ ನಿರ್ಣಯವೊಂದನ್ನು pass ಮಾಡಿ ಒಂದು ಒಳ್ಳೆಯ message ಇಡೀ ರಾಜ್ಯದ ಜನತೆಗೆ ಕೊಟ್ಟಿದ್ದೇವೆ. ಈಗ ಬರಗಾಲದ ಬಗ್ಗೆ ಮತ್ತು ನಂಜುಂಡಪ್ಪನವರ ವರದಿಯ ಬಗ್ಗೆ ಮತ್ತು ಇತರ ವಿಷಯಗಳ ಬಗ್ಗೆ ಇಲ್ಲಿ ಮಾತನಾಡದೆ ಹೋದರೆ ಅದು ಚೆನ್ನಾಗಿರುವುದಿಲ್ಲ. ಈ ಬಿಲ್ ಏನಿದೆ, ಇದನ್ನು ಬೇರೆ ದಿನ ಅಥವಾ ಬೆಂಗಳೂರಿನಲ್ಲಿ ನೀವು session ಕರೆದಾಗ ಬೇಕಾದರೆ ತೆಗೆದುಕೊಳ್ಳೋಣ. ಇದನ್ನು ತರಾತುರಿಯಲ್ಲಿ ಇಲ್ಲೇ ಚರ್ಚೆ ಮಾಡಬೇಕೆಂದೇನೂ ಇಲ್ಲ. ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮತ್ತು ತಾವೂ ಒಪ್ಪಿಕೊಂಡ ಹಾಗೆ, ಕೇಂದ್ರ ಸರ್ಕಾರದಲ್ಲೂ ಕೂಡ ಇದಕ್ಕೆ Joint Parliamentary Committee ಮಾಡಿದ್ದಾರೆ. ನೀವು ಬೇಕಾದರೆ ನೇರವಾಗಿ without discussion, Joint Select Committeeಗೆ ಇಲ್ಲೂ ಒಪ್ಪಿಸಿಬಿಡಿ. ಆ Joint Select Committee ಒಂದು ತಿಂಗಳೋ ಅಥವಾ ಎರಡು ತಿಂಗಳೋ ಈ issue ಅನ್ನು settle ಮಾಡಿ ಬೇಗನೇ ವರದಿ ಕೊಡುವಂತಹ ವ್ಯವಸ್ಥೆ ಮಾಡಿ. ಅದನ್ನು ಸುಮ್ಮನೆ ನಾವು ಇಲ್ಲಿ ಚರ್ಚೆ ಮಾಡಿಕೊಳ್ಳುತ್ತಾ ಕುಳಿತು, ವಾದ-ವಿವಾದ....

ಶ್ರೀ ಎಂ.ಪಿ. ಪ್ರಕಾಶ್: ಈಗ ಲೋಕಸಭೆಯಲ್ಲಿ ನಿಮ್ಮ ಸ್ಥಾನಮಾನಗಳನ್ನು ನೀವು ರಕ್ಷಣೆ ಮಾಡಿಕೊಂಡಿದ್ದೀರಿ. ಇಲ್ಲಿ ರಾಜ್ಯಪಾಲರು ನಮಗೆ ಅಂಕಿತವನ್ನು ಹಾಕಬೇಕಾಗುತ್ತದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಹೀಗೇ ಹೇಳಿಕೊಂಡು ಈಗಾಗಲೇ ಎರಡು ವರ್ಷ ತಳ್ಳಿಯಾಯಿತು. ಶ್ರೀಮಾನ್ ಧರ್ಮಸಿಂಗ್ ಸಾಹೇಬ್‌ರವರ ನೇತೃತ್ವದಲ್ಲಿ 18 ತಿಂಗಳು ಮತ್ತು ಶ್ರೀಮಾನ್ ಕುಮಾರಸ್ವಾಮಿಯವರ ನೇತೃತ್ವದಲ್ಲಿ 7 ತಿಂಗಳು ಆಗಿದೆ. ಇನ್ನು 3-4 ತಿಂಗಳು ಹೋದರೆ ಆಕಾಶವೇನು ಕಡಿದು ಬೀಳುತ್ತದೆಯೇ? ಆದ್ದರಿಂದ ಇದನ್ನು Joint Select Committeeಗೆ ತಾವು refer ಮಾಡಿ. ಈಗ ಸಧ್ಯಕ್ಕೆ ಯಾವ ವಿಷಯದ ಮೇಲೆ ಚರ್ಚೆ ಮಾಡಬೇಕೆಂದು

ನಾವು ಬಂದಿದ್ದೇವೋ, ದಯವಿಟ್ಟು ಅದಕ್ಕೆ ತಾವು ಅವಕಾಶ ಮಾಡಿಕೊಡಿ. ನಾವು ಬೇಕಾದರೆ ನಂಜುಂಡಪ್ಪನವರ ವರದಿ ಮತ್ತು ಬರಗಾಲ, ಎರಡರ ಮೇಲೂ ಕೂಡ ಮಾತನಾಡೋಣ. ಯಾವ ಸದಸ್ಯರು ನಂಜುಂಡಪ್ಪ ವರದಿ ಮೇಲೆ ಮಾತನಾಡುತ್ತಾರೋ ಮಾತನಾಡಲಿ. ಯಾರು ಬರಗಾಲ ಅಥವಾ flood ವಿಷಯದಲ್ಲಿ ಮಾತನಾಡುತ್ತಾರೋ ಮಾತನಾಡಲಿ. ಏಕೆಂದರೆ ಸಮಯವಿಲ್ಲ. ನಾಳೆ Governor ರವರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಬೇಕಾದರೆ ನೀವು ಅವರಿಗೆ 29ಕ್ಕೆ ಬನ್ನಿ ಎಂದು ಹೇಳಿ. 28ನೇ ತಾರೀಖು ಕೂಡ ಇದನ್ನು ನೀವು ಚರ್ಚೆಗೆ ತೆಗೆದುಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಅದೇನೇ ಇರಲಿ, ಅದು ನಿಮಗೆ ಬಿಟ್ಟಿದ್ದು. ಈ Office of Profit Bill ಅನ್ನ ತಾವು defer ಮಾಡಿ, Joint Select Committeeಗೆ ಹಾಕಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಮಗೆ urgent ಏನೂ ಇಲ್ಲ. ಮಾನ್ಯ ಶ್ರೀನಿವಾಸಗೌಡರು ಬೇಕಾದರೆ ಇದು ಬೇಡ ಎಂದು ಹೇಳಲಿ, ನಾವು ಇದನ್ನು ಮುಂದಕ್ಕೆ ಹಾಕುತ್ತೇವೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಏನಾಗಿದೆ ಎಂದರೆ, ಹಾಲಿನವರದ್ದು ಮತ್ತು Fertilizers ರವರದ್ದು ಸಮಸ್ಯೆಯಾಗಿದೆ. ಅದಕ್ಕಾಗಿ ಈ Bill ಬೇಗನೆ ಬಂದಿದೆ....

ಶ್ರೀ ಹೆಚ್.ಡಿ. ರೇವಣ್ಣ: ..... ಮಾನ್ಯ ಶ್ರೀನಿವಾಸಗೌಡರಿಗೆ ಅನ್ಯಾಯವಾಗಬಾರದು ಎಂದು ಹೇಳುತ್ತಿದ್ದೇವಷ್ಟೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ರೇವಣ್ಣನವರು ನಮಗೇನು ಒಳ್ಳೆಯದಾಗಲಿ ಎಂದು ಹೇಳುತ್ತಿಲ್ಲ. ಅವರಿಗೂ ಕೂಡ ಇದು ಪಾಸ್ ಆಗುವುದು ಬೇಕಾಗಿದೆ. ಆದುದರಿಂದ ಅವರು ಇದನ್ನು ಪಾಸ್ ಮಾಡಿ ಕೊಡಿ ಎಂದು ನಮಗೆ ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಸ್ವಾಮಿ, ನನಗೆ ಇದು ಬೇಡ. ಮಾನ್ಯ ಸಭಾಧ್ಯಕ್ಷರೆ, ಇದು ನನಗೆ ಬೇಡ. ಪಾಪ! ಅವರಿಗೆ ಅನುಕೂಲವಾಗಲಿ. ಅವರಿಗೆ ಬೇಕಾದರೆ ಮಾಡಿ, ಬೇಡವೆಂದರೆ ಬಿಡಿ.

ಶ್ರೀ ಕೆ. ಶ್ರೀನಿವಾಸಗೌಡ: ಇದರ ವಿಷಯದಲ್ಲಿ ಈಗಾಗಲೇ ಎರಡು ದಿನ ಚರ್ಚೆ ಮಾಡಿದ್ದೇವೆ. ನಾವೂ ಕೂಡ ಸ್ವಲ್ಪ ಕಷ್ಟದ ಪರಿಸ್ಥಿತಿಯಲ್ಲಿ ಇದ್ದೇವೆ ಎಂದು ನಮ್ಮ ನಾಯಕರುಗಳಿಗೆ ಹೇಳಬಯಸುತ್ತೇನೆ. ನಾಳೆ Election ಬಂದು ಯಾರಾದರೂ ಈ Selection ಮೇಲೆ ಅರ್ಜಿ ಕೊಟ್ಟರೆ ನಾವು ಅನರ್ಹರಾಗುತ್ತೇವೆ. ವಾಸ್ತವಾಂಶ ಮುಚ್ಚಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ರೇವಣ್ಣನವರಂತೆ ವಾಸ್ತವಾಂಶವನ್ನು ಮುಚ್ಚಿಟ್ಟುಕೊಳ್ಳಲು ನಾನೇನೂ ರೆಡಿ ಇಲ್ಲ. ನಾನಂತೂ....

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಅದು ಬೇಡ ಸಾರ್.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ರೇವಣ್ಣನವರು ಮುಚ್ಚಿಟ್ಟುಕೊಳ್ಳುತ್ತಿದ್ದಾರೆ. ಇರುವುದನ್ನು ಅವರು ಹೇಳಬೇಕು. ಈಗ ನಮ್ಮ ನಾಯಕರುಗಳ ಅಭಿಪ್ರಾಯ ಬೇರೆ ಇದೆ. ನಮ್ಮ ನಾಯಕರುಗಳು ಅವರ ಅಭಿಪ್ರಾಯವನ್ನು ದಯವಿಟ್ಟು ಬದಲಾಯಿಸಿ, ಇದನ್ನು pass ಮಾಡಿ ಕೊಡಬೇಕು ಎನ್ನುವುದೇ ನನ್ನ ಬೇಡಿಕೆ. ಈಗಾಗಲೇ ಎರಡು ದಿವಸ ನಾವು ಇದರ ಮೇಲೆ ಚರ್ಚೆ ನಡೆಸಿಬಿಟ್ಟಿದ್ದೇವೆ. ಇದರ ಮೇಲೆ ಬೇಕಾದಷ್ಟು ಬೆಳಕನ್ನು ಚೆಲ್ಲಿದ್ದೇವೆ. ಇದರ ಜೊತೆಗೆ ಇದರಲ್ಲಿ 'ಸಹಕಾರ' ಎಂದು ಸೇರಿಸಿಲ್ಲ. ಇದೊಂದನ್ನು ಇದರಲ್ಲಿ ಸೇರಿಸಬೇಕು, ಅದನ್ನು ಬಿಟ್ಟಿದ್ದೀರಿ. ಅದೊಂದನ್ನೂ ಸೇರಿಸಿ ಪಾಸ್ ಮಾಡಿಕೊಡಬೆಕು. ನಮ್ಮ ನಾಯಕರುಗಳು ದಯವಿಟ್ಟು ತಮ್ಮ ಅಭಿಪ್ರಾಯ ಬದಲಾಯಿಸಿಕೊಳ್ಳಬೇಕು. ನಮಗೆಲ್ಲಾ ತೊಂದರೆಯಾಗುತ್ತದೆ. ಆದ್ದರಿಂದ ನಮ್ಮ ನಾಯಕರುಗಳೂ ಕೂಡ ಇದನ್ನು ಪಾಸ್ ಮಾಡಲು ದೊಡ್ಡ ಮನಸ್ಸು ಮಾಡಬೇಕೆಂದು ಅವರಿಗೆ ನಾನು ಪ್ರಾರ್ಥನೆ ಮಾಡುತ್ತೇನೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ತಾವು ಒಪ್ಪುವುದಾದರೆ, ಹಿಂದೆ ನಾವು ಚರ್ಚೆ ಮಾಡಿ ಈ ಮಸೂದೆಯನ್ನು ಅಂಗೀಕರಿಸಿದ್ದೇವೆ. ಬಹಳ ಸರಳವಾಗಿರತಕ್ಕಂಥ clauseವೊಂದನ್ನು ಮಾತ್ರ ನಾವು ಇದರಲ್ಲಿ introduce ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ: ಬಿಲ್ ಈಗ ಬೇಡ. ಮೊದಲು ಬರಗಾಲದ ಬಗ್ಗೆ ಚರ್ಚೆ ಶುರು ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಸಲಹೆ ಏನಿದೆ, ಅದಕ್ಕೆ ತಾವು ಒಪ್ಪಿ, 28-29ನೇ ತಾರೀಖಿನವರೆಗೂ ಸದನ ಮುಂದುವರೆಸುವುದಾದರೆ, ಈಗ ಬರದ ಬಗ್ಗೆ ಚರ್ಚೆಯಾಗಲಿ.

(ಅಡಚಣೆ)

ಶ್ರೀ ಜಿ.ಟಿ. ದೇವೇಗೌಡ: ಮಾನ್ಯ ಅಧ್ಯಕ್ಷರೆ, ಇದನ್ನು ಈಗಾಗಲೇ ತಂದಿದ್ದೇವೇ. ದಯವಿಟ್ಟು ಬಿಲ್ ಅನ್ನು ತೆಗೆದುಕೊಳ್ಳಿ. ಇದರಿಂದ ಹೆಚ್ಚೇನೂ ಸಮಯವಾಗುವುದಿಲ್ಲ. ಇದು ಪಾಸ್ ಆಗಬೇಕೆಂದೂ ಆ ಕಡೆಯವರೂ ಹೇಳುತ್ತಿದ್ದಾರೆ, ಈ ಕಡೆಯವರೂ ಹೇಳುತ್ತಿದ್ದಾರೆ. ಆದ್ದರಿಂದ ಬಿಲ್ ಅನ್ನು ಈಗ ತೆಗೆದುಕೊಳ್ಳಿ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ: ಇರುವ ವಾಸ್ತವಾಂಶವನ್ನು ಮತ್ತು ಕಷ್ಟವನ್ನು ನಾವಿಲ್ಲಿ ಹೇಳಿದ್ದೇವೆ. ಈ ಕಷ್ಟ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೂ ಇದೆ. ಈ ಕಷ್ಟವನ್ನು ದೂರ ಮಾಡಬೇಕಾಗುತ್ತದೆ. ಅದನ್ನು ಬೇಕಾದರೆ ತಾವು ನಾಳೆಯಾದರೂ ಪಾಸ್ ಮಾಡಿಕೊಡಿ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ಆದರೆ ಅದು ಇದೇ session ನಲ್ಲಂತೂ ಆಗಲೇಬೇಕು.

(ಅಡಚಣೆ)

ಅಧ್ಯಕ್ಷರು: ಈಗಾಗಲೇ Office of Profit Bill ಚರ್ಚೆಯಾಗಿದೆ. ಆದುದರಿಂದ ದಯಮಾಡಿ ಇದನ್ನು ತೆಗೆದುಕೊಂಡು ಮುಗಿಸಿಬಿಡಿ. ನಾಳೆ, ನಾಡಿದ್ದು ಎನ್ನುವುದು ಬೇಡ. ಆಗ ಬೇರೆ ಬೇರೆ issue ಗಳು ಬರುತ್ತವೆ. ಅದರಿಂದ ಕಾಲಹರಣವಾಗಿ ಬಿಡುತ್ತದೆ. ಸುಮ್ಮನೆ ಬರದ ಬಗ್ಗೆಯೂ ಚರ್ಚೆಯಾಗುವುದಿಲ್ಲ ಅಥವಾ ನಂಜುಂಡಪ್ಪನವರ ವರದಿ ಬಗ್ಗೆಯೂ ಚರ್ಚೆಯಾಗುವುದಿಲ್ಲ. ಇದನ್ನು ಮಾಡಿಬಿಟ್ಟು ಅದನ್ನು ಆರಂಭ ಮಾಡಿಬಿಡೋಣ.

(ಅಡಚಣೆ)

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದನ್ನು ತೆಗೆದುಕೊಂಡು ಪಾಸ್ ಮಾಡಿ ಕೊಟ್ಟುಬಿಡಿ.

(ಅಡಚಣೆ)

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, Office of Profit Bill ಅನ್ನು ಮಾತ್ರ ನಾವು ಇಲ್ಲಿ ತೆಗೆದುಕೊಂಡು ಚರ್ಚೆ ಮಾಡಿದರೆ ಈ ಭಾಗದ ಜನರಿಗೆ ಬಹಳ ತಪ್ಪಾಗುತ್ತದೆ....

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ: ಇದಕ್ಕೆ ಯಾವುದೇ ವಿಧವಾದಂತಹ ಚರ್ಚೆ ಬೇಡ. ಈಗಾಗಲೇ ಇದರ ಮೇಲೆ ಎರಡು ದಿವಸ ಚರ್ಚೆಯಾಗಿದೆ. ಬೇಕಾದಷ್ಟು ಇದರ ಮೇಲೆ ಬೆಳಕು ಚೆಲ್ಲಲಾಗಿದೆ. ಇದನ್ನು ಪಾಸ್ ಮಾಡಿಕೊಟ್ಟು ಬೇರೆ ವಿಚಾರ ಚರ್ಚೆ ಮಾಡಿ. ಈ ಭಾಗದ ಚರ್ಚೆಯೇ ಆಗಲಿ. ಅದನ್ನು ನಾವೇನೂ ಬೇಡವೆಂದು ಹೇಳುವುದಿಲ್ಲ.

(ಅಡಚಣೆ)

ಅಧ್ಯಕ್ಷರು: ಈಗ ಒಬ್ಬೊಬ್ಬರು ಒಂದೊಂದು ತರಹ ಮಾತನಾಡಿದರೆ ಹೇಗೆ? Office of Profit Bill pass ಆಗಬೇಕೆಂದು ಸರ್ಕಾರದವರು ಹೇಳುತ್ತಾರೆ. ಆ ಕಡೆಯವರು ಮತ್ತು ಈ ಕಡೆಯವರು ಇಲ್ಲಿ ಬಹಳ ಜನ ಮಾತನಾಡುತ್ತಿದ್ದಾರೆ. ನಾನೇನು ವಿನಂತಿ ಮಾಡುತ್ತೇನೆ ಎಂದರೆ, ಇದನ್ನು ನಾಳೆ ತೆಗೆದುಕೊಳ್ಳಬೇಕು ಎನ್ನುವುದಾದರೆ ನಾಳೆಯೇ ತೆಗೆದುಕೊಳ್ಳೋಣ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇದು ಚರ್ಚೆಯಾಗಿ ಒಂದು ಸಾರಿ ಪಾಸ್ ಆಗಿರುವುದರಿಂದ ಬೇಗ ಇದನ್ನು ಮುಗಿಸಿಕೊಂಡು ಬರ, ನಂಜುಂಡಪ್ಪನವರ ವರದಿ ಮತ್ತು ಇತರ ಬೇರೆ ಬೇರೆ ಸಮಸ್ಯೆಗಳನ್ನು ತೆಗೆದುಕೊಳ್ಳೋಣವೆಂದು ನಾನು ಹೇಳುತ್ತಿದ್ದೇನೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನೂ Joint Select Committeeಗೆ ಹಾಕಿ, ಆಗ ಇದೆಲ್ಲಾ ಕಿರಿಕಿರಿ ಹೋಗಿಬಿಡುತ್ತದೆ. 15 ದಿವಸ ಅಥವಾ ಒಂದು ತಿಂಗಳಿನಲ್ಲಿ ಅದರ ವರದಿ ಬರುತ್ತದೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ತಿದ್ದುಪಡಿ ವಿಧೇಯಕವನ್ನು ಪುಸರ್ ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ. ಆದ್ದರಿಂದ ಇದರಲ್ಲಿ....

(ಅಡಚಣೆ)

ಅಧ್ಯಕ್ಷರು: ಅದನ್ನು ಮುಗಿಸಿಬಿಡಿ. ಮುಗಿಸಿಬಿಟ್ಟು ಆಮೇಲೆ ನಾವು ಮುಂದಕ್ಕೆ ಹೋಗೋಣ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: 2ನೇ ಖಂಡದ....

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರೆ, ತಾವು ಇದನ್ನು ಪಾಸ್ ಮಾಡಲೇಬೇಕಾಗಿತ್ತು ಎಂದರೆ, ತಾವು ಇದನ್ನು ತಮ್ಮ Legislature Party Meetingನಲ್ಲೇ ಮಾಡಬೇಕಾಗಿತ್ತು. ಏನು ಇದರ ಅರ್ಥ? ಇಲ್ಲಿ ಹೌಸ್ ಇದೆ. ಈಗಾಗಲೇ ಮಾನ್ಯ ಖರ್ಗೆಯವರು ಇದು Joint Select Committeeಗೆ refer ಆಗಬೇಕು, discussion ಆಗಬೇಕು ಎಂದು ಹೇಳುತ್ತಿದ್ದಾರೆ. ನಾವೇನೂ ಇದನ್ನು ಬೇಡವೆಂದು ಹೇಳುತ್ತಿಲ್ಲ. ಹೀಗೇ ಏಕ್‌ದಂ ನಿಮಗೆ ಸಂಖ್ಯಾಬಲ ಇದೆ ಎಂದು ನಾನು ಕೈ ಎತ್ತಿಕೊಂಡು ಪಾಸ್ ಮಾಡುವುದಾದರೆ ಇದೇನಿದು? Office of Profit Bill ಬಗ್ಗೆ National level ನಲ್ಲಿ ಮತ್ತು State level ನಲ್ಲಿ ಬಹಳಷ್ಟು ಚರ್ಚೆ ನಡೆದಿದೆ. ಇಂತಹ ಸಂದರ್ಭದಲ್ಲಿ ತಾವು ಇದನ್ನು ತರಾತುರಿಯಲ್ಲಿ ಏಕೆ ಮಾಡುತ್ತಿದ್ದೀರೋ ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ತಾವು ಹಿರಿಯರಿದ್ದೀರಿ. ತಮ್ಮ ಪಕ್ಷದ ಸದಸ್ಯರೂ ಕೂಡ ಇದರ ಅವಶ್ಯಕತೆ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ...

ಶ್ರೀ ಎನ್. ಧರ್ಮಸಿಂಗ್: ಅವರು ವ್ಯಕ್ತಿಗತವಾಗಿ ಹೇಳಿರಬಹುದು.

ಶ್ರೀ ಎಂ.ಪಿ. ಪ್ರಕಾಶ್: ಅದರ ಜೊತೆಗೆ ಲೋಕಸಭೆಯಲ್ಲಿ ಏನಾಯಿತು ಎಂಬುದು ತಮಗೆ ಗೊತ್ತಿದೆ. ತಮ್ಮ ಪಕ್ಷದವರೇ ಅಧಿಕಾರದಲ್ಲಿ ಇರುವಂತಹ ಕೇಂದ್ರದಲ್ಲಿ ನಿಮ್ಮ ಕಾನೂನಿನ ಮಂತ್ರಿಗಳೇ ಇದರ ಬಗ್ಗೆ ಮಂಡಿಸಿದ್ದಾರೆ. ಮಂಡಿಸಿ, ಅದಕ್ಕೆ ರಾಷ್ಟ್ರಪತಿಗಳ ಅಂಕಿತವನ್ನು ಪಡೆದಿದ್ದಾರೆ. ಅಲ್ಲಿ ಅಂಕಿತವನ್ನು ಪಡೆದು ಇಲ್ಲಿ ಮಾತ್ರ ಅದು Joint Select Committeeಗೆ ಹೋಗುವುದಲ್ಲ. ನಾವು

ಚರ್ಚೆ ಮಾಡೇ ಇದನ್ನು ಕಳುಹಿಸಿಕೊಡಬೇಕು. ನಾವು ಭಾವಿಸಿದ್ದು, ಕಾಂಗ್ರೆಸ್ ಪಕ್ಷದವರು ಅಲ್ಲಿ ಕೇಂದ್ರದಲ್ಲಿ ಯಾವ ರೀತಿಯಾಗಿ ಒಂದು ಕಾನೂನನ್ನು ತಂದಿದ್ದಾರೆ, ಅದೇ ಪ್ರಕಾರ ನಾವು ಕಾನೂನನ್ನು ತಂದಿದ್ದೇವೆ. ಆ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ತಾತ್ವಿಕವಾಗಿ ವಿರೋಧ ಇದಕ್ಕೆ ಇದೆಯೆಂದು ನಾನು ಭಾವಿಸಿಲ್ಲ.

ಶ್ರೀ ವೈಜನಾಥ್ ಪಾಟೀಲ್: ಇದಕ್ಕೆ ನನ್ನ ವಿರೋಧ ಇದೆ. ಇದು ಕೇವಲ ನಿಮ್ಮ ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ಈ ಬಿಲ್‌ನು ತರುತ್ತಿದ್ದೀರಿ. ಉತ್ತರ ಕರ್ನಾಟಕದ ಅನೇಕ ಸಮಸ್ಯೆಗಳು ಇವೆ. ಮೊದಲು ಅದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಆದುದರಿಂದ ಮಾನ್ಯ ಅಧ್ಯಕ್ಷರೆ, ಎರಡನೇ ಖಂಡದ 5ನೇ ಉಪಖಂಡದಲ್ಲಿ ಈ ಬಾಬ್ತಿಗೆ

(ಅಡಚಣೆ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿಯಪ್ಪಾ.

(ಅಡಚಣೆ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿರಪ್ಪ, ಏಕೆ ಈ ರೀತಿ ಎಲ್ಲರೂ ಗಲಾಟೆ ಮಾಡುತ್ತೀರಿ?

ಶ್ರೀ ಎನ್.ಎಸ್. ಭೋಸರಾಜ್: ಬೆಳಿಗ್ಗೆಯಿಂದ ಐವತ್ತು ಸಾರಿ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಬೇಕು, ಬರಗಾಲದ ಬಗ್ಗೆ ಮಾತನಾಡಬೇಕು ಎಂದು ಹೇಳುತ್ತಿದ್ದರು ನೀವು ಕೇಳುತ್ತಿಲ್ಲ. ಆದುದರಿಂದ ಮೊದಲು ಬರಗಾಲದ ಬಗ್ಗೆ ಚರ್ಚೆ ಆಗಲಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಉತ್ತರ ಕರ್ನಾಟಕದ ಬಗ್ಗೆ ಮಾತನಾಡುವುದಕ್ಕೆ ಬಂದಿದ್ದೀರೋ ಅಥವಾ ನಿಮ್ಮ ನಿಮ್ಮ ಶಾಸಕರುಗಳೇನಿದ್ದಾರೆ, ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ನವರಿಗೆ ಕೊಡತಕ್ಕಂಥ ಲಾಭದಾಯಕ ಹುದ್ದೆ ಬಗ್ಗೆ ಮಾತನಾಡಲಿಕ್ಕೆ ಬಂದಿದ್ದೀರೋ? ಲಾಭದಾಯಕ ಹುದ್ದೆ ಬಗ್ಗೆ You refer to the Joint Select Committee. ಲಾಭದಾಯಕ ಹುದ್ದೆಗೆ ಸಂಬಂಧಪಟ್ಟ ವಿಧೆಯಕವನ್ನು ಇಷ್ಟು ತರಾತರಿಯಲ್ಲಿ ಮಂಡನೆ ಮಾಡುವುದು ಸರಿಯಲ್ಲ. ಎಂ.ಪಿ. ಪ್ರಕಾಶ್‌ರವರೇ, ತಮ್ಮ ಕಾಲದಲ್ಲಿ ಇಂಥ ಬಿಲ್‌ನ್ನು ತರಾತುರಿಯಲ್ಲಿ ಪಾಸ್ ಮಾಡಿಸಿಕೊಳ್ಳುವುದು ಸರಿಯಲ್ಲ. ನೀವು ಆ ರೀತಿ ಮಾಡಬಾರದು. ಮಾನ್ಯ ರೇವಣ್ಣನವರು ಪಕ್ಕದಲ್ಲಿ ಕುಳಿತು ಹೇಳುವುದನ್ನು ನೀವು ಕೇಳುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್: ಇಲ್ಲಿ ಕೇಳಿ, ಮಾನ್ಯ ಅಧ್ಯಕ್ಷರು ಕರೆದಿದ್ದರಿಂದ ಈ ಬಗ್ಗೆ ಚರ್ಚೆ ಮಾಡಿ.....

ಶ್ರೀ ಆರ್.ಎ. ದೇಶಪಾಂಡೆ: ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಬೆಳಗಾವಿ ಅಧಿವೇಶನದಲ್ಲಿ ಎಂದು ಹೇಳುತ್ತಿದ್ದೀರಲ್ಲಾ. ಅದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ. ಅದನ್ನೇ ಮೊದಲು ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್: ಲಾಭದಾಯಕ ಹುದ್ದೆಯ ವಿಧೇಯಕವನ್ನು ಮುಂದೆ ತೆಗೆದುಕೊಳ್ಳಿ. ಬರಗಾಲ ಮತ್ತು ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯನ್ನು ಮೊದಲು ತೆಗೆದುಕೊಳ್ಳಿ. ನಾಳೆ ನೋಡೋಣ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೌರವ ಕೊಟ್ಟು ನಾಳೆ ನಾಡಿದ್ದು ಸಭೆ ನಡೆಯುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಅಭಿನಂದಿಸುತ್ತೇನೆ. ಈಗ ಬರಗಾಲದ ವಿಚಾರವನ್ನು ಚರ್ಚೆ ಮಾಡಿ. ನಾಳೆ ಲಾಭದಾಯಕ ಹುದ್ದೆಗೆ ತಾವು ಒಪ್ಪಿಗೆಯನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೆ, ನಾಳೆ ರಾಜ್ಯಪಾಲರು ಬರುತ್ತಾರೆ. ರಾಜ್ಯಪಾಲರು ಬರುವುದರಿಂದ ಬಹುಶಃ ಎರಡು ಗಂಟೆಯವರೆಗೆ ಅವರ ಕಾರ್ಯಕ್ರಮಗಳೇ ನಡೆಯುತ್ತದಲ್ಲಾ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬಿ.ಎ.ಸಿ.ಯಲ್ಲಿ ತೀರ್ಮಾನವಾದಂತೆ ರಾಜ್ಯಪಾಲರ ಸಂದೇಶ ಮುಗಿದ ಮೇಲೆ ಮಧ್ಯಾಹ್ನ ಸಭೆಯನ್ನು ಅನಿರ್ಧಿಷ್ಟ ಕಾಲ ಮುಂದಕ್ಕೆ ಹಾಕಬೇಕೆಂದು ನಿರ್ಣಯ ಮಾಡಿದ್ದೇವೆ. ಈಗ ಮಾನ್ಯ ಮುಖ್ಯಮಂತ್ರಿಗಳ ಅಪ್ಪಣೆಯನ್ನು ಪಡೆದು ನಾನು ಒಂದು ಸಲಹೆಯನ್ನು ಇಟ್ಟೆ. ನಾಳೆಯೂ ಕೂಡ ಮಾನ್ಯ ರಾಜ್ಯಪಾಲರು ಸಂದೇಶವನ್ನು ಕೊಟ್ಟು ನಿರ್ಗಮಿಸಿದ ನಂತರ ಮಧ್ಯಾಹ್ನದ ಅವಧಿಯಲ್ಲಿ ಈ ಮಸೂದೆಗಳ ಬಗ್ಗೆ ಚರ್ಚೆಯಾಗಲಿ. ಮೊದಲೇ ನಿರ್ಧಾರ ಮಾಡಿದಂತೆ 29ನೇ ತಾರೀಖಿನವರೆಗೆ ಈ ಅಧಿವೇಶನ ಮುಂದುವರೆಯಲಿ. ಆ ರೀತಿ ಮುಂದುವರೆಯುವುದಕ್ಕೆ ಅವರ ಆಕ್ಷೇಪಣೆ ಇಲ್ಲವೆಂದು ಅವರು ಹೇಳಿರುವುದರಿಂದ ಇದನ್ನು ವಿಧಾನ ಪರಿಷತ್ತಿಗೂ ಕೂಡ ಕಳಹಿಸುವುದಕ್ಕೆ ಸಮಯ ಸಿಗುತ್ತದೆ. ಆದ್ದರಿಂದ ಈಗ ಬರಗಾಲದ ಬಗ್ಗೆ ಚರ್ಚೆಯಾಗಲಿ, ಪ್ರವಾಹದ ಬಗ್ಗೆ ಚರ್ಚೆಯಾಗಲಿ, ನಾಳೆ ಈ ಮಸೂದೆಯನ್ನು ಮಾನ್ಯ ರಾಜ್ಯಪಾಲರು ತಮ್ಮ ಸಂದೇಶದ ಭಾಷಣವನ್ನು ಮಾಡಿ ನಿರ್ಗಮಿಸಿದ ನಂತರ....

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರೆ, ಬೆಳಗಾವಿ ವಿಶೇಷ ಅಧಿವೇಶನ ಎಂದು ಕರೆದು ಇಲ್ಲಿ ನೀವು ಲಾಭದಾಯಕ ಹುದ್ದೆಯ ವಿಧೇಯಕವನ್ನು ಪಾಸ್ ಮಾಡಿಸಿಕೊಂಡರೆ ಇದಕ್ಕೋಸ್ಕರವೇ ಅಧಿವೇಶನ ಕರೆದು ವಿಧೇಯಕ ಪಾಸ್ ಮಾಡಿಸಿಕೊಂಡರು ಎಂದು ಮೆಸೇಜ್ ಹೋಗುತ್ತದೆ. ಬರಗಾಲದ ಬಗ್ಗೆ ಚರ್ಚೆಯಾದಂತಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮೆಸೇಜ್‌ನ ಪ್ರಶ್ನೆ ಎಂದು ಬರುವುದಿಲ್ಲ. ಇಲ್ಲಿ ಕೇಳಿ ನೀವು. ಸರ್ಕಾರಿ ಕಾರ್ಯಕಲಾಪಗಳಿಗೆ ಬಹಳ ದೊಡ್ಡ ಮಾನ್ಯತೆ ಇರುತ್ತದೆ. ವಿಧೇಯಕದ ಬಗ್ಗೆ ನಮ್ಮ ಕಾರ್ಯಕಲಾಪದಲ್ಲಿ ಈಗಾಗಲೇ ಕಾಣಿಸಿಕೊಂಡಿದ್ದೇವೆ. ಅದರ ಬಗ್ಗೆ ನಾಳೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡುವುದಾಗಿದ್ದರೆ ನಾನು ನಾಳೆಯೇ ಮಸೂದೆಯನ್ನು ಮಂಡಿಸುತ್ತೇನೆ. ನಾಳೆ ನಾನು ಮಸೂದೆಯನ್ನು ಮಂಡಿಸುತ್ತೇನೆ. ನೀವು ಎಷ್ಟು ಹೊತ್ತು ಬೇಕಾದರೂ ಅದರ ಮೇಲೆ ಚರ್ಚೆ ಮಾಡಿ. ಆದರೆ ನೀವು ಹೇಳಿದಂತೆಯೇ ನಡೆಸಬೇಕೆಂದೇನೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ವಿನಂತಿ ಮಾಡುವುದೇನೆಂದರೆ ಕಳೆದ ಎರಡು ದಿನಗಳಿಂದ ಪ್ರಸ್ತಾಪ ಬಂತು, ನಾವುಗಳೆಲ್ಲರೂ ಉತ್ತರ ಕರ್ನಾಟಕದ ಭಾಗಗಳಿಂದ ಬಂದಿದ್ದೇವೆ, ಇಲ್ಲಿ ಬರಗಾಲದ ಬಗ್ಗೆ ಚರ್ಚೆ ಆಗಬೇಕು, ಡಾ: ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಆಗಬೇಕು, ಪತ್ರಿಕೆಯವರು ಬರೆದರು ವೇಳೆಯನ್ನು ನಾವೇ ಸ್ವಾಹ ಮಾಡುತ್ತಿದ್ದೇವೆಂದು, ಆದುದರಿಂದ ಈಗ ನಾವೇನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇವೆಂದರೆ, Office of profit bill ಏನು ಇದೆಯಲ್ಲಾ, ಅದನ್ನು ಸ್ವಲ್ಪ ಬದಿಗೆ ಇಡಿ. ಅದೇನೋ ಬಹಳ ಅರ್ಜೆಂಟ್ ಇಲ್ಲ. ನೀವು ನಿಮಗೆ ಬೇಕಾದಾಗ ಅದನ್ನು ಪಾಸ್ ಮಾಡಬಹುದು. ಅದೇನೂ ಈಗಲೇ ಅವಶ್ಯಕತೆ ಇಲ್ಲ. ನೀವು ಈಗ ಬರಗಾಲದ ವಿಷಯದ ಮೇಲೆ ಚರ್ಚೆ ತೆಗೆದುಕೊಳ್ಳಿ. ಡಾ: ನಂಜುಂಡಪ್ಪ ವರದಿ ಮೇಲೆ ಚರ್ಚೆ ತೆಗೆದುಕೊಂಡು ಅವೆರಡೂ Simultaneously ಚರ್ಚೆ ಆಗಲಿ simultaneously ಚರ್ಚೆ ಮಾಡಿಸಿರಿ. ಸಮಯ ಇದ್ದರೆ ಅದರ ಬಗ್ಗೆ ಚರ್ಚೆ ಮಾಡೋಣ. ಅಂದರೆ ಮುಂದೆ ತೆಗೆದುಕೊಳ್ಳುವುದಕ್ಕೆ ಅದು ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡತಕ್ಕಂಥ ವಿಷಯದಲ್ಲಿ ನಮ್ಮದ್ಯಾರದ್ದೂ ಆಕ್ಷೇಪಣೆ ಇಲ್ಲ. ಚರ್ಚೆ ಮಾಡತಕ್ಕಂಥ ಅಧಿಕಾರ ಸದನದಲ್ಲಿರುವ ಎಲ್ಲಾ ಶಾಸಕರಿಗೂ ಇದೆ. ಈ ಒಂದು ಅಧಿವೇಶನವನ್ನು ಕರೆದಾಗ ನಮ್ಮ ಸರ್ಕಾರಿ ಕಾರ್ಯಕಲಾಪಗಳು, legislative business ಎಂದೇ ನಾವು ಕರೆದಿದ್ದೇವೆ. ಇದಕ್ಕೆ ಸಂಬಂದಪಟ್ಟಿರತಕ್ಕಂಥದ್ದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ತಾವು ಸಲಹೆ ಕೊಟ್ಟಿರುವುದರಿಂದ ನಾನು ಈ ಸಂದರ್ಭದಲ್ಲಿ ಇಷ್ಟನ್ನು ಒಪ್ಪಿಕೊಳ್ಳುತ್ತೇನೆ. ಬರಗಾಲದ ಬಗ್ಗೆ ಈಗ ಚರ್ಚೆಯಾಗಲಿ. ಯಾರು ಅಡ್ಡಿ ಆತಂಕಗಳನ್ನು ಮಾಡಿದರೂ ಮತ್ತೊಂದು ಮಗದೊಂದು ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕಾದ್ದಿಲ್ಲ. ಜನ ಅದನ್ನು ಯಾವಾಗ ತೀರ್ಮಾನ ಮಾಡುತ್ತಾರೋ ಮಾಡಲಿ. ಆದರೆ ಇಲ್ಲಿರತಕ್ಕಂಥದ್ದು ಬರಗಾಲದ ಬಗ್ಗೆ, ಪ್ರವಾಹದ ಬಗ್ಗೆ ಈಗ ಚರ್ಚೆ ಆಗಲಿ. ಹಿಂದೆ ನಡೆದ ಬಿ.ಎ.ಸಿ. ಮೀಟಿಂಗ್‌ನಲ್ಲಿ ತಾವೂ ಕೂಡ ಇದ್ದಿರಿ. ಅಲ್ಲಿ ಮಾಡಿದ ನಿರ್ಣಯ ನಮಗೆ ಅಡ್ಡಿ ಬರುತ್ತಿತ್ತು, ಆ

ನಿರ್ಣಯ ಯಾವುದೆಂದರೆ, ನಾಳೆ ರಾಜ್ಯಪಾಲರ ಸಂದೇಶದ ನಂತರ ಅನಿರ್ದಿಷ್ಟ ಕಾಲದವರೆಗೆ ಸದನವನ್ನು ಮುಂದೂಡಬೇಕೆಂದು ನಿರ್ಣಯ ಮಾಡಲಾಗಿತ್ತು. ಆ ಬಗ್ಗೆ ಬದಲಾವಣೆ ಮಾಡಲು ಸದನದಲ್ಲಿಯೇ ಎಲ್ಲಾ ಸದಸ್ಯರುಗಳು ಇರುವುದರಿಂದ, ಬಿ.ಎ.ಸಿ. ಕಮಿಟಿ ಜೊತೆಗೆ ಇಡೀ ಸದನವೇ ಒಪ್ಪುವುದಾಗಿದ್ದರೆ ಬಿ.ಎ.ಸಿ. ಕಮಿಟಿ ಸಭೆಯನ್ನು ಮತ್ತೆ ಕರೆಯಬೇಕಾದ ಅವಶ್ಯಕತೆ ಇರುವುದಿಲ್ಲ. B.A.C. has to assist and facilitate the Speaker in order to draw the Agenda. ಆದರೆ ಇಡೀ ಸದನವೇ ಒಪ್ಪಿರತಕ್ಕಂಥ ಕಾರಣವಾಗಿರುವುದರಿಂದ ತಾವು ನಾಳೆ ರಾಜ್ಯಪಾಲರು ತಮ್ಮ ಸಂದೇಶದ ಭಾಷಣವನ್ನು ಮಾಡಿ ನಿರ್ಗಮಿಸಿದ ನಂತರ ಮಧ್ಯಾಹ್ನದಿಂದ 29ನೇ ತಾರೀಖಿನವರೆಗೂ ಕೂಡ ಚರ್ಚೆ ಮಾಡುವಾಗ ಬರಗಾಲದ ಬಗ್ಗೆಯೂ ಚರ್ಚೆಯಾಗಲಿ, ಈ ಮಸೂದೆಗಳ ಬಗ್ಗೆಯೂ ಕೂಡ ಚರ್ಚೆಯಾಗಲಿ. ಅಷ್ಟರ ಮಟ್ಟಿಗೆ ತಾವು ಸಹಕಾರ ಕೊಡುತ್ತೀರೆಂದು ನಾನು ನಂಬಿದ್ದೇನೆ. ಆ ರೀತಿ ಮಾಡುವುದೇ ಆಗಿದ್ದರೆ, ಇವೊತ್ತು ಇದನ್ನು ಪ್ರಸ್ತಾಪ ಮಾಡದೇ ನಾಳೆ ಇದನ್ನು ಪ್ರಸ್ತಾಪ ಮಾಡುತ್ತೇನೆ. ಆಗ ತಾವು ಚರ್ಚೆಯನ್ನು ಮಾಡಬಹುದು.

ಶ್ರೀ ಜಿ.ಟಿ. ದೇವೇಗೌಡ: ನಾಳೆಯೂ ಕೂಡ ಇವರು ಇವೊತ್ತಿನ ಹಾಗೆಯೇ ಮಾಡಬಹುದು.

(ಅಡಚಣೆ)

ಅಧ್ಯಕ್ಷರು: ಎಲ್ಲರೂ ಮಾತನಾಡುವುದಕ್ಕೆ ಹೋಗಬೇಡಿ. ನಾನು ಹೇಳುವುದನ್ನು ಕೇಳಿ. ನೀವು ನೀವುಗಳೇ ವಾದ ಪ್ರತಿವಾದ ಮಾಡುತ್ತಾ ಸಮಯ ಕಳೆಯಬೇಡಿ. ದಯವಿಟ್ಟು ನಿಮ್ಮ ರಾಜಕೀಯ ವಿಚಾರಗಳನ್ನು ಸ್ವಲ್ಪ ಆ ಕಡೆ ಈ ಕಡೆ ಇಡಿ. ಒಬ್ಬರು ಮಾತನಾಡಿದರೆ ಮತ್ತೊಬ್ಬರು ಮಾತನಾಡುತ್ತಾ ಹೋಗುವುದು ಇದು ಬೇಡ. ಈಗ ಬರಗಾಲ ಮತ್ತು ನಂಜುಂಡಪ್ಪ ವರದಿ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ಸರ್ಕಾರಿ ಕಾರ್ಯಕಲಾಪಗಳನ್ನು 29ನೇ ತಾರೀಖಿನವರೆಗೆ ನಡೆಸುವುದು ಎಂದು ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಆ ಕಾರಣದಿಂದ ಸದನದ ಅಧಿವೇಶನವನ್ನು 29ನೇ ತಾರೀಖಿನವರೆಗೆ ನಡೆಸೋಣ. ಈ ಮಸೂದೆಗಳು ಯಾವುವು ಅರ್ಜೆಂಟ್ ಇವೆಯೋ ಅದನ್ನು ತೆಗೆದುಕೊಳ್ಳೋಣ. ಅದರ ಜೊತೆಗೆ ಉತ್ತರ ಕರ್ನಾಟಕದ್ದು ಬೇರೆ ಬೇರೆ ಸಮಸ್ಯೆಗಳೇನಿವೆ ಆ ಬಗ್ಗೆ ಕೂಡ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಧರ್ಮಸಿಂಗ್: ಆಗಬಹುದು.

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ರಮೇಶ್‌ಕುಮಾರ್, ದೇಶಪಾಂಡೆ, ಬಸವರಾಜ ರಾಯರೆಡ್ಡಿ, ಡಿ.ಆರ್. ಪಾಟೀಲ್ ಹಾಗೂ ಇತರರು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಉಂಟಾಗಿರುವ ದುಷ್ಪರಿಣಾಮದ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್: ಈಗಾಗಲೇ ಬಹಳ ಲೇಟ್ ಆಗಿದೆ. ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರಾದ ತಾವು ಮೊದಲು ಪ್ರಾರಂಭ ಮಾಡಿ ಒಂದೈದು ನಿಮಿಷ. ಒಳ್ಳೆಯ ಶುಭ ಘಳಿಗೆಯಲ್ಲಿ ಆರಂಭ ಮಾಡಿ.

(ಅಡಚಣೆ)

ಅಧ್ಯಕ್ಷರು: ಮೊದಲು ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಲಿ. ಆಮೇಲೆ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ದಯಮಾಡಿ ಎಲ್ಲರೂ ಸಹಕಾರ ಕೊಡಿ.

6.00 P.M.

10. ನಿಯಮ 69ರ ಮೇರೆಗೆ

ವಿಷಯ: ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಮತ್ತು ಸಕಾಲದಲ್ಲಿ ಮಳೆಯಾಗದೇ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಬರ ಮತ್ತು ಪ್ರವಾಹ ಏನು ಬಂದಿದೆ, ಇವತ್ತು ಬಹಳ ಕಿತ್ತಾಟದಿಂದ ಕೊನೆಗೆ ಅಧ್ಯಕ್ಷರು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಈ ವರ್ಷ ಮೊದಲೇ ಮುಂಗಾರು ಮಳೆ ಬರಲಿಲ್ಲ. ರಾಜ್ಯದ ಎಲ್ಲಾ ಕಡೆ ಕೂಡ ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿದೆ. ಈಗ ಹಿಂಗಾರು ಬಿತ್ತನೆ ಪ್ರಾರಂಭವಾಗಿದೆ. ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಕೂಡ ಪ್ರವಾಸ ಮಾಡಿದ್ದಾರೆ. ನಾವೂ ಕೂಡ ಹೋಗಿ ಬಂದಿದ್ದೇವೆ. ಪಕ್ಷದ ಪರವಾಗಿ ಎಲ್ಲಾ ಕಡೆಗೆ ನಾವು ತಂಡವನ್ನು ರಚಿಸಿ ಸಾಮಾನ್ಯ ಜನರ ರೈತರ ಬವಣೆ ಏನಿದೆ, ಪರಿಸ್ಥಿತಿ ಏನಿದೆ ಎಂದು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ತಾವು ಕೂಡ ಹೋಗಿದ್ದೀರಿ, ಗುಲ್ಬರ್ಗ ಕಡೆ ಬಂದಿದ್ದೀರಿ, ಮಣ್ಣೂರಿಗೆ ಕೂಡ ಹೋಗಿದ್ದೀರಿ. ಇದೆಲ್ಲವನ್ನೂ ಕೂಡ ನೋಡಿಕೊಂಡು, ಸರ್ಕಾರ ಯಾವಾಗಲೂ ಕೂಡ ಸಂಕಟದಲ್ಲಿ ಇರುವಂತಹ ಜನರ ನೆರವಿಗೆ ಬರಬೇಕಾಗಿತ್ತು. 1972ರಲ್ಲಿ ಮೊಟ್ಟ ಮೊದಲನೆಯದಾಗಿ ನಾವು ಮಾನ್ಯ ಖರ್ಗೆಯವರು ಮತ್ತು ರಮೇಶ್‌ಕುಮಾರ್‌ರವರು ಶಾಸಕರಾಗಿ ಬಂದಿದ್ದೆವು. ಗುಲ್ಬರ್ಗ ಭಾಗದಲ್ಲಿ ಎಂದೆಂದಿಗೂ ಆಗಲಾರದಂತಹ 50 ವರ್ಷಗಳ ನಂತರ ಬರದ ಛಾಯೆ ಬಂದಿತ್ತು. ಆಗ ದಿವಂಗತ ದೇವರಾಜು ಅರಸುರವರು ಅಂದಿನ ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಎಂ.ವೈ. ಘೋರ್ಪಡೆಯವರು ರಾಜ್ಯದ ಹಣಕಾಸಿನ ಸಚಿವರಾಗಿದ್ದರು. ಎಲ್ಲಾ ತಂಡ ಮಾನ್ಯ ಕೆ.ಹೆಚ್. ಪಾಟೀಲ್‌ರವರಿಂದ ಹಿಡಿದು, ಯಾರು ಪ್ರಮುಖ ಖಾತೆ ಹೊಂದಿದ್ದರು, ಎಲ್ಲರಿಗೂ ಕೂಡ ಒಂದೊಂದು